2010ರಲ್ಲಿ ಯೂರೋಪಿಗೆ ಜಿಗಿತ. ಜೆಕೊಸ್ಲಾವಾಕಿಯಾದ ಪ್ರಾಗ್‌ನಲ್ಲಿ 14ನೇ ಅಂತರರಾಷ್ಟ್ರೀಯ ಬೊಂಬೆಗಳ ಉತ್ಸವ. 38 ದೇಶಗಳು ಭಾಗವಹಿಸಿದ್ದುವು. ರಮೇಶರ ತಂಡದ ಪ್ರವಾಸಕ್ಕೆ ಇನ್ಫೋಸಿಸ್‌ನ ಸುಧಾಮೂರ್ತಿಯವರು ದೊಡ್ಡ ಮೊತ್ತದ ಕೊಡುಗೆ ನೀಡಿದ್ದರು. ಸ್ಥಳೀಯವಾಗಿ ಅಷ್ಟಿಷ್ಟು ಸಂಗ್ರಹವಾಗಿತ್ತು. ಪ್ರಾಗ್ ಉತ್ಸವ ತಂಡದ ಪಾಲಿಗೆ ಹೊಸ ಅನುಭವ ಕಟ್ಟಿಕೊಟ್ಟಿತ್ತು. ಬೊಂಬೆಗಳನ್ನು ನೋಡಿ ಅಲ್ಲಿನವರು ದಂಗಾಗಿದ್ದರು. 'ಅತ್ಯುತ್ತಮ ಪಾರಂಪರ್ಯ ಬೊಂಬೆಗಳ ಪ್ರಶಸ್ತಿ'ಯನ್ನು ಪಡೆದ ರಮೇಶ್ ಎಲ್ಲಾ ದೇಶಗಳ ಗಮನ ಸೆಳೆದಿದ್ದರು.

## ಭಾರತೀಯರ ಬೆನ್ನೇರಿದ ಪಿಶಾಚಿ!

ಅಹಮದಾಬಾದ್, ಚೀನಾದ ಸುದ್ದಿಯನ್ನು ಹೇಳುತ್ತಾ ರಮೇಶ್ ತಮ್ಮ ಕಲಾಯಾನದ ಹಿನ್ನೋಟದ ಕೆಲವು ಘಟನೆಗಳತ್ತ ಹೊರಳಿದರು. ಬೊಂಬೆಯಾಟ ಸಂಘದ ಚಟುವಟಿಕೆಗಳ ವೀಕ್ಷಣೆಗೆ ಫ್ರಾನ್ಸ್‌ನಿಂದ ವಿದ್ಯಾರ್ಥಿಗಳಿಬ್ಬರು ಆಗಮಿಸಿದ್ದರು. ಕಾಸರಗೋಡು ಹೊಸ ಊರು, ಹೊಸ ಭಾಷೆ. ಹೊಸ ಸಂಸ್ಕೃತಿ! ಅವರಿಗೆ ಸಂವಹನ ಕಷ್ಟವಾಯಿತು. ರಮೇಶ್ ಹೇಗೋ ಸುಧಾರಿಸಿಕೊಂಡರು. ಒಂದೇ ದಿನದಲ್ಲಿ ದೇಶ–ಭಾಷೆಯನ್ನು ಮೀರಿದ ಕಲೆಯು ಸಂವಹನ ಬೆಳೆಸುವಷ್ಟು ಭಾಷೆಯನ್ನು ಕಲಿಸಿತ್ತು!

ಇಲ್ಲಿನ ಜನಜೀವನ, ಆಹಾರ ಪದ್ಧತಿಗಳು ಫ್ರಾನ್ಸ್ ಅತಿಥಿಗಳಿಗೆ ಪರಿಚಯವಿಲ್ಲ. ಇವರು ಮನೆಯೊಳಗೆ ಕಾಲಿಡುತ್ತಿದ್ದಂತೆ ದಿಗಿಲು! ಸಂಶಯಪಿಶಾಚಿ ಬೆನ್ನೇರಿತ್ತು. ರಮೇಶ್ ಹೇಳುತ್ತಾರೆ, 'ನಮ್ಮನ್ನು ಪ್ರಾಣಿಗಳನ್ನು ನೋಡಿದ ಹಾಗೆ ನೋಡುತ್ತಿದ್ದ ಮುಖಭಾವ ಇನ್ನೂ ಮರೆತಿಲ್ಲ. ಶೌಚಕ್ಕೆ, ಸ್ನಾನಕ್ಕೆ ಹೋಗುವಾಗಲೆಲ್ಲಾ ಅವರ ಕೈಚೀಲ ಹೆಗಲಲ್ಲೇ ತೂಗುತ್ತಿತ್ತು! ಯಾಕೀ ಸಂಶಯ? ಸಮಯ ಸರಿದಂತೆ ನಮ್ಮ ವರ್ತನೆ, ಸಂಘದ ಚಟುವಟಿಕೆ, ಮನೆ ಮಂದಿಯ ಆತಿಥ್ಯವನ್ನು ಅನುಭವಿಸುತ್ತಾ ಅರ್ಧ ದಿವಸದಲ್ಲೇ ನಮ್ಮವರಾಗಿಬಿಟ್ಟರು.'

'ಇಂತಹ ಸಂಶಯವು ಅವರಲ್ಲಿ ಯಾವ ಭಾವವನ್ನು ಮೂಡಿಸಿದ್ದಿರಬಹುದು?' ನಾನು ಪ್ರಶ್ನಿಸಿದ್ದೆ. ಉತ್ತರ ಕೇಳಿ ಆಶ್ಚರ್ಯವಾಯಿತು. 'ಭಾರತದಲ್ಲಿ ಎಲ್ಲೆಲ್ಲೂ ಮೋಸ, ವಂಚನೆ. ಹೆಣ್ಣನ್ನು ಕಂಡರೆ ಅಮಾನುಷವಾಗಿ ವರ್ತಿಸುತ್ತಾರೆ. ವಿದೇಶಿಯರೆಂದರೆ ಅನಾದರ...' ಇವೇ ಮೊದಲಾದ ಭಾವಗಳನ್ನು ಅಲ್ಲಿನ ಮಾಧ್ಯಮಗಳು ಬಿಂಬಿಸುತ್ತಲೇ ಇವೆಯಂತೆ. ಇದನ್ನು ನೋಡುತ್ತಾ ನೋಡುತ್ತಾ ಭಾರತದ, ಭಾರತೀಯರ ಕುರಿತು ಕೆಟ್ಟ ಭಾವನೆಯ ಮನಸ್ಥಿತಿಯನ್ನು ಹೊಂದಿದ್ದರು.

ರಮೇಶರ ಮನೆಯವರ ವರ್ತನೆ, ಆತಿಥ್ಯ ಮತ್ತು ಕಲಾಸಂಸ್ಕೃತಿಯ ಅನುಷ್ಠಾನವನ್ನು ನೋಡುತ್ತಾ ನೋಡುತ್ತಾ ನೋಡುತ್ತಾ ತಮ್ಮ ವರ್ತನೆಗೆ ತಾವೇ ನಾಚಿಕೊಂಡರು. ಒಂದೇ ದಿವಸದಲ್ಲಿ ಮನೆಯವರಾದರು. ತಮ್ಮ ತಲೆಯೊಳಗೆ ಭಾರತದ ಕುರಿತು ಹರಿಯಬಿಟ್ಟ ಅಸತ್ಯದ ಹುಳ ಸತ್ಯವಲ್ಲ ಎಂದು ಮನವರಿಕೆಯಾಯಿತು. ರಮೇಶ್ ಅತಿಥಿಗಳಿಗೆ ಯಕ್ಷಗಾನದ ವೇಷಭೂಷಣಗಳನ್ನು ಪ್ರತ್ಯೇಕವಾಗಿ ತೋರಿಸಲು ವ್ಯವಸ್ಥೆ ಮಾಡಿದರು. ಪ್ರದರ್ಶನವನ್ನೂ ತೋರಿಸಿದ್ದರು. ಈ ಎಲ್ಲಾ ಮನಸ್ಥಿತಿಯನ್ನು ನೋಡುತ್ತಾ ಮರಳಿ ತಮ್ಮ ದೇಶಕ್ಕೆ ಹೋಗುವಾಗ ರಮೇಶರಿಗೆ ಏನು ಹೇಳಿರಬಹುದು? 'ನಿಮ್ಮನ್ನು, ದೇಶವನ್ನು ತುಂಬಾ ಕೆಟ್ಟದಾಗಿ ಅರ್ಥ ಮಾಡಿಕೊಂಡಿದ್ದೆವು. ಹಾಗಲ್ಲ ಎನ್ನುವುದು ಅರಿವಾಯಿತು. ಭಾರತ ಸುಸಂಸ್ಕೃತ ದೇಶ. ಇಲ್ಲಿ ಕಲೆಗೆ ಸ್ಥಾನವಿದೆ, ಮಾನವಿದೆ.!'

ಇಂಗ್ಲೆಂಡಿನಿಂದ ಮಹಿಳೆಯೋರ್ವರು ಅಧ್ಯಯನಕ್ಕಾಗಿ ಬಂದಿದ್ದರು. ಇವರಲ್ಲೂ ಕೂಡಾ ಮೇಲಿನಂತಹುದೇ ಭಾವವಿದ್ದರೂ ಅಷ್ಟೊಂದು ಗಾಢವಾಗಿರಲಿಲ್ಲ. ರಮೇಶರ ಅಮ್ಮ ಗಿರಿಜಾರಿಗೆ ಅವರ ಭಾಷೆ ಬರುವುದಿಲ್ಲ, ಇಂಗ್ಲೆಂಡಿನ ಅತಿಥಿಗೆ ಇಲ್ಲಿನ ಭಾಷೆಯ ತೊಡಕು! 'ಅವರು ಮನೆಯಲ್ಲಿದ್ದಷ್ಟೂ ದಿವಸ ಅಮ್ಮ ಮಾತನಾಡುತ್ತಿದ್ದರು!' ಎನ್ನುತ್ತಾರೆ ರಮೇಶ್. 'ಭಾರತದಲ್ಲಿ ಇಷ್ಟೊಂದು ಪ್ರಾಮಾಣಿಕತೆ, ಕಲೆಯ ವೈಭವ, ಬದುಕಿನಲ್ಲಿ ಸಂಸ್ಕೃತಿಯ ಅನುಷ್ಠಾನಗಳಿರುವುದು ನಿಜಕ್ಕೂ ಅಚ್ಚರಿ. ನಮ್ಮ ದೇಶದಲ್ಲಿ ಭಾರತವನ್ನು ಕೆಟ್ಟದಾಗಿ ಚಿತ್ರಿಸುತ್ತಾರೆ. ನಾವೆಲ್ಲಾ ಸತ್ಯವೆಂದು ನಂಬಿದ್ದೆವು. ಇಲ್ಲಿಗೆ ಬಂದಾಗ ಸತ್ಯದ ಅರಿವಾಯಿತು' ಎಂದು ಆ ಇಂಗ್ಲೆಂಡ್ ಅತಿಥಿ ಪ್ರತಿಕ್ರಿಯಿಸಿದ್ದರಂತೆ.



ಈ ತಂಡಕ್ಕೆ ಬೊಂಬೆಗಳ ನಂಟು

ಈ ಎರಡು ನೈಜ ಚಿತ್ರಣವು ಭಾರತದ ಕುರಿತು ವಿದೇಶಿಯರಿಗಿದ್ದ ಭಾವಗಳ ಪ್ರಕಟೀಕರಣ. ಭಾರತವನ್ನು ತುಚ್ಛವಾಗಿ ಕಾಣುತ್ತಾರೆ ಮತ್ತು ಅದನ್ನು ಸ್ಥಾಪಿಸುತ್ತಾರೆ ಎನ್ನುವುದಕ್ಕೆ ಕಾಸರಗೋಡಿಗೆ ಬಂದ ಅತಿಥಿಗಳ ಮಾತುಗಳು ಸಾಕ್ಷಿಯಾಗಿ ನಿಲ್ಲುತ್ತದೆ. ಯಾಕೆ ಹೀಗಾಗುತ್ತಿದೆ? ನಾವು ಮಾಧ್ಯಮಗಳ ಮೇಲೆ ಗೂಬೆ ಕೂರಿಸಬಹುದು. ಇತಿಹಾಸದತ್ತ ಬೆರಳು ತೋರಬಹುದು. ಪಕ್ಕದ ರಾಷ್ಟ್ರಗಳತ್ತ ಕತ್ತು ಹೊರಳಿಸಬಹುದು. ಇಲ್ಲಿನ ಇತಿಹಾಸ, ಸಂಸ್ಕೃತಿಯನ್ನು ವಿದೇಶಿ ಮಾಧ್ಯಮಗಳು ತಮಗೆ ಬೇಕಾದಂತೆ ತಿರುಚಿ ಪ್ರಸಾರಿಸುತ್ತವೆ. ಅದಕ್ಕೆ ನಮ್ಮ ದೇಶದ ಕೆಲವು ವ್ಯವಸ್ಥೆಗಳ ಕುಮ್ಮಕ್ಕಿದೆ!

## ಬೊಂಬೆಮನೆಯ ಕನಸು

ರಮೇಶ್ ಅವರ ಕನಸಿನ ಯೋಜನೆಯಿದು. ಕಾಸರಗೋಡಿನ ಪಿಲಿಕುಂಜೆಯಲ್ಲಿ (ಬಸ್‌ನಿಲ್ದಾಣದಿಂದ ಕಾಞಂಗಾಡ್ ಹೊಸ ಮಾರ್ಗದಲ್ಲಿ ಎರಡು ಕಿಲೋಮೀಟರ್ ದೂರ) ಆಕರ್ಷಕ ವಿನ್ಯಾಸದ 'ಯಕ್ಷಪುತ್ಥಳಿ ಬೊಂಬೆಮನೆ' (ಮ್ಯೂಸಿಯಂ) ಕಟ್ಟಡ ಎದ್ದು ನಿಂತು ನಾಲ್ಕು ವರುಷವಾಯಿತು. ಇದರಲ್ಲಿ ಯಕ್ಷಗಾನದ ವಿವಿಧ ವೇಷಗಳ ಬಹು ವಿನ್ಯಾಸಗಳ ಒಂದು ಸಾವಿರ ಗೊಂಬೆಗಳ ಸಂಗ್ರಹವಿರಬೇಕೆನ್ನುವುದು ಯೋಚನೆ. ಇಲ್ಲಿಗೆ ಬಂದರೆ ಭಾರತೀಯ ಪರಂಪರೆಯೊಂದರ ದರ್ಶನವಾಗಬೇಕು ಎನ್ನುವ ಆಶಯ. ತಮ್ಮ ಗಳಿಕೆಯ, ಸಹೋದರರ ಸಹಕಾರದಿಂದ ಮ್ಯೂಸಿಯಂ ಸಿದ್ಧವಾಗಿದೆ. ಸರ್ಕಾರದಿಂದ ಒಂದು ಪೈಸೆಯೂ ಸಿಕ್ಕಿಲ್ಲ.

ಒಂದೊಂದು ಗೊಂಬೆಗಳ ರಚನೆಗೆ ಏನಿಲ್ಲವೆಂದರೂ ಮೂವತ್ತೈದರಿಂದ ನಲವತ್ತು ಸಾವಿರ ವೆಚ್ಚ ಬರಬಹುದು. ದೀರ್ಘ ಬಾಳ್ವಿಕೆಯ ಮರವನ್ನು ಬಳಸಬೇಕಾಗುತ್ತದೆ. ಇದಕ್ಕೆ ಬೇಕಾದ ದೊಡ್ಡ ಮೊತ್ತವನ್ನು ಹೊಂದಾಣಿಸಲು ಅಸಾಧ್ಯ. ಮ್ಯೂಸಿಯಂ ಕಾರ್ಯವೆಸಗಲಿ ಇಲ್ಲದಿರಲಿ, ಸರ್ಕಾರದ ತೆರಿಗೆ ಕಟ್ಟಲೇ ಬೇಕು. ಈಗ ಅದೊಂದು ಹೆಚ್ಚುವರಿ ಹೊರೆ. 'ಪರಂಪರೆಯ ಕಲೆಯೊಂದನ್ನು ಉಳಿಸುವ ಹಿನ್ನೆಲೆಯಲ್ಲಿ ಸರ್ಕಾರ ಬೆಂಬಲ ನೀಡಬೇಕಿತ್ತು' ಎಂದು ವಿಷಾದಿಸುತ್ತಾರೆ ರಮೇಶ್.

'ಮ್ಯೂಸಿಯನಿಂದ ಯಾವುದೇ ಅರ್ಥಿಕ ಗಳಿಕೆಯ ಉದ್ದೇಶದ ಲವಲೇಶವೂ ಇಲ್ಲ. ಎಲ್ಲರಿಗೂ ಮುಕ್ತ ಪ್ರವೇಶ. ವಿದ್ಯಾರ್ಥಿಗಳಿಗೆ ಉಚಿತ ತರಬೇತಿ. ಮ್ಯೂಸಿಯಂ ರಚನೆಗಾಗಿ ನನ್ನ ಸಮಯ, ಗಳಿಕೆ, ಸಹೋದರರ ಕೊಡುಗೆ... ಹೀಗೆ ವ್ಯಯವಾಗಿದೆ. ಬೊಂಬೆಗಳ ನಿರ್ಮಾಣವು ಸಹಾಯಕರನ್ನು – ಲೇಬರ್ – ಇಟ್ಟುಕೊಂಡು, ಅವರನ್ನು ನಂಬಿಕೊಂಡು ಮಾಡುವಂತಹುದಲ್ಲ. ಸ್ವತಃ ಸಮಯ ಕೊಟ್ಟು ಮಾಡಬೇಕು. ಇನ್ನೇನಿದ್ದರೂ ಸರ್ಕಾರ, ಕಲಾಪ್ರೀತಿಯ ಸಂಸ್ಥೆಗಳು ಸಹಕರಿಸಿದರೆ ಮಾತ್ರ ಮ್ಯೂಸಿಯಂ ಸರ್ವಸಜ್ಜಾಗಬಹುದಷ್ಟೇ. ವೈಯಕ್ತಿಕವಾಗಿ ಹಣವನ್ನು ಭರಿಸಲು ಕಷ್ಟಸಾಧ್ಯ' ಎಂದರು ರಮೇಶ್. ಈಗಾಗಲೇ ಬೇರೆ ಬೇರೆ ರಾಷ್ಟ್ರಗಳ ಕಲಾಪ್ರಿಯರು ಅಧ್ಯಯನಗಳಿಗಾಗಿ ಬೊಂಬೆಗಳನ್ನು ಹುಡುಕಿ ಬರುತ್ತಿದ್ದಾರೆ.

ಇಂದು ಕಲೆಗಾಗಿ ಕೋಟಿಗಟ್ಟಲೆ ಮೊತ್ತವು ಮುಂಗಡಪತ್ರದಲ್ಲಿ ಕಾಣುತ್ತದೆ. ಎಲ್ಲಿಗೆ ಸಲ್ಲಬೇಕೋ ಅಲ್ಲಿಗೆ ಸಲ್ಲುತ್ತಿಲ್ಲ. ಮಾರ್ಚ್ ಕೊನೆಗೆ ಅದು ವಿಲೇವಾರಿಯಾಗುತ್ತದೆ! ರಮೇಶರ ಬೊಂಬೆಯಾಟ ಸಂಘದ ಮ್ಯೂಸಿಯಂಗೆ ಸರ್ಕಾರ ಆರ್ಥಿಕ ಸಹಕಾರ ನೀಡಿದರೆ, ಅದು ತೆಂಕುತಿಟ್ಟು ಯಕ್ಷಗಾನ ಬೊಂಬೆಯಾಟ ಪ್ರಕಾರವೊಂದರ ರಕ್ಷಣೆಗೆ ನೆರವಾಗುತ್ತದೆ. ಪಾರಂಪರಿಕ ಕಲೆಯೊಂದನ್ನು ಉಳಿಸಿದಂತಾಗುತ್ತದೆ. ■